# ಮಕ್ಕಳಿಗಾಗಿ ಬೈಬಲ್

### ಅರ್ಪಿಸುವ

## ಪೇತ್ರನು ಮತ್ತು ಪ್ರಾರ್ಥನೆಯ ಶಕ್ತಿ




ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen


60ರ 57ನೇ ಕಥೆ

**www.M1914.org**


***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada



ಅಪೋಸ್ತಲನಾದ ಪೇತ್ರನು ಯೇಸುವನ್ನು ಕುರಿತು ಸಾಕ್ಷಿ ಹೇಳುವುದಕ್ಕಾಗಿ ದೇಶದ ಎಲ್ಲಾ ಕಡೆ ಪ್ರಯಾಣವನ್ನು ಮಾಡಿದನು. ಲೂದ್ಯ ಎಂಬ ಪಟ್ಟಣದಲ್ಲಿ ಸುಮಾರು ೮ ವರ್ಷದಿಂದ ಪಾರ್ಶ್ವವಾಯು ರೋಗದಲ್ಲಿ ಬಿದ್ದಿರುವಂತ ಒಬ್ಬ ವ್ಯಕ್ತಿಯನ್ನು ಸಂದಿಸಿದನು.

1



ಅವನನ್ನು ಪೇತ್ರನು ನೋಡಿ ಯೇಸುವು ನಿನ್ನನು ಗೂಣಪಡಿಸುತ್ತಿದ್ದಾನೆ ನಿನ್ನ ಹಾಸಿಗೆಯನ್ನು ತಗೆದುಕೊಂಡು ನಡೆ ಎಂದು ಹೇಳಿದ ಕೂಡಲೆ ಅವನು ತನ್ನ ಹಾಸಿಗೆಯನ್ನು ತಗೆದುಕೊಂಡು ನಡೆದನು. ಈತನು ಕರ್ತನ ಕಡೆ ತಿರುಗುವುದನ್ನು ಜನರು ನೋಡಿದರು.

2


ಅಲ್ಲಿ ಹತ್ತಿರವಿರುವ ಯೊಪ್ಪ
ಎಂಬ ಸ್ಥಳದಲ್ಲಿ ವಾಸವಾಗಿರುವ
ದೊರ್ಕಳು ಎಂಬ ಕ್ರೈಸ್ತ ಸ್ತ್ರೀ ಸತ್ತು
ಹೋಗಿರುವುದರಿಂದ ಅಲ್ಲಿನ ಜನರು
ಬಹಳವಾಗಿ ದುಖ:ಪಡುತ್ತಿದ್ದರು.
3


ಅವಳ ಸ್ನೇಹಿತರು
ಅವಳ ಶರೀರವನ್ನು ಸಮಾಧಿ
ಮಾಡುವುದಕ್ಕಾಗಿ ಸಿದ್ದಪಡಿಸುತ್ತಿದ್ದರು.
ಅಲ್ಲಿರುವ ಮೇಲಿನ ಕೋಣೆಯಲ್ಲಿ
ಅವಳಿಗಾಗಿ ಗೋಳಾಡುತ್ತಿದ್ದರು.
4


ಅವಳ ಸ್ನೇಹಿತರು ಪೇತ್ರನು
ಅಲ್ಲೆ ಎಲ್ಲೊ ಹತ್ತಿರ ಇದ್ದಾನೆ
ಎಂದು ತಿಳದಾಕ್ಷಣವೇ ಅವನ್ನು
ಕರೆಯುವುದಕ್ಕೆ ಹೋದರು.
ಪೇತ್ರನು ಬಂದು ಮೇಲಿನ
ಕೊಣೆಗೆ ಹೋದನು. ಆಗ ಆ
ವಿದವೆಯರು ದೊರ್ಕಳ ವಸ್ತ್ರವನ್ನು
ತೋರಿಸಿ ಗೋಳಾಡುವುದಕ್ಕೆ
ಪ್ರಾರಂಭಿಸಿದರು.
5


ಪೇತ್ರನು ಅಲ್ಲಿರುವಂತ
ಎಲ್ಲಾರನ್ನು ಹೊರಗೆ ಕಳಿಸಿ
ಅವನು ಮೊಣಕಾಲನ್ನು ಹಾಕಿ
ಪ್ರಾರ್ಥಿಸಿ ಅವಳ ಕಡೆಗೆ ತಿರುಗಿ
'ದೊರ್ಕಳೆ ಎದ್ದೆಳು' ಎಂದನು.
ಆಗ ಅವಳು ನಿಧಾನವಾಗಿ
ತನ್ನ ಕಣ್ಣನ್ನು ಬಿಟ್ಟು ಮುಂದೆ
ಕೂತಿರುವಂತ ಪೇತ್ರನನ್ನು
ಕಂಡಳು.
6


ಪೇತ್ರನು ಅವಳ ಕೈಯನ್ನು
ಹಿಡಿದು ಮೇಲೆತ್ತಿ ಆ
ಭಕ್ತಳಾದ ಆ ಸ್ತ್ರಿಯನ್ನು
ಕರೆದು ಅವಳನ್ನು ಆ
ವಿದವೆಯರಿಗೆ ಒಪ್ಪಿಸಿದನು.
ಅದನ್ನು ನೋಡಿದ ಆ
ಯೊಪ್ಪದಲ್ಲಿರುವಂತ ಅನೇಕ
ಜನರು ಯೇಸುವನ್ನು
ನಂಬಿದರು.
7


ಪೇತ್ರನು ಬಹಳ ದಿನಗಳ ವರೆಗೂ ಯೋಪ್ಪದಲ್ಲಿದ್ದನು ಅವನು
ಸಮುದ್ರದ ಬಳಿಯಲ್ಲಿರುವ ಒಂದು ಮನೆಯಲ್ಲಿದ್ದನು ಒಂದು
ದಿನ ಪೇತ್ರನು ಪ್ರಾರ್ಥನೆಗಾಗಿ ಆ ಮನೆಯ
ಮಾಳಿಗೆಯ ಮೇಲೆ ಹೋದನು.
8


ಆಗ ಆತನು ನೋಡಿದಾಗ ಮೂರು ಪ್ರಯಾಣಿಕರು
ಅವನ್ನು ಕಾಣಲು ಬರುತ್ತಿರುವದನ್ನು ಕಂಡನು.
9


ಇವರು ರೋಮದ ಸೈನಿಕನನಾದ ಕೊರ್ನೇಲ್ಯನ ಸೇವಕರು.
ಈ ಕೊರ್ನೇಲ್ಯನು
ದೇವರಲ್ಲಿ ಭಯಭಕ್ತಿವುಳ್ಳ
ಮನುಷ್ಯನಾಗಿದ್ದನು.
10


ಇವನಿಗೆ ದೇವ ದೂತನು ಪ್ರತ್ಯಕ್ಷನಾಗಿ ದರ್ಶನಕೊಟ್ಟು
ಪೇತ್ರನನ್ನು ಕರೆಯಲು ಅಪ್ಪಣೆಯನ್ನು ಕೊಟ್ಟಿದ್ದನು.
ಅವನು ಬಂದು
ನೀನು ಏನನ್ನು
ಮಾಡಬೇಕೆಂದು
ಹೇಳುತ್ತಾನೆಂದು
ತಿಳಿಸಿದನು.
11


ಪೇತ್ರನು ಪ್ರಾರ್ಥನೆಗಾಗಿ ಆ ಮನೆಯ ಮಾಳಿಗೆಯ ಮೇಲೆ ಇರುವಾಗ ದೇವರು
ಅವನಿಗೆ ಒಂದು ದರ್ಶನವನ್ನು ಕೊಟ್ಟನು.
12


ಅದೇನೆಂದರೆ ಪರಲೋಕದಿಂದ ಒಂದು ಜೋಳಿಗೆ ಇಳಿದು ಬಂತು ಅದರಲ್ಲಿ
ಸಕಲ ವಿಧವಾದ ಪಶುಗಳೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೂ
ಅಂತರಿಕ್ಷದಲ್ಲಿ ಹಾರಾಡುವ
ಹಕ್ಕಿಗಳೂ ಇದ್ದವು.
13


ಅದನ್ನು ನೋಡುತ್ತಿರುವಾಗ ಆಕಾಶದಿಂದ ‘ಪೇತ್ರನೇ ಅದನ್ನು ಕೊಯ್ದು
ತಿನ್ನು’ ಎಂದು ಒಂದು ವಾಣಿಯಾಯಿತು. ಇದರ ಅರ್ಥ ಧಾರ್ಮಿಕ ಯಹೂದ್ಯ
ನಾಯಕರು ಅದನ್ನು ತಿನ್ನುತ್ತಿರಲಿಲ್ಲ.
14


ಪೇತ್ರನು ಬೇಡವೆ ಬೇಡಾ ಸ್ವಾಮಿ, ನಾನು ಎಂದಿಗೂ ಹೊಲೆ ಪದಾರ್ಥಗಳನ್ನಾಗಲಿ ಅಶುದ್ಧ ತಿಂದವನಲ್ಲ ಅಂದನು. ಪುನ: ಆಕಾಶದಿಂದ ವಾಣಿಯಾಗಿ, ದೇವರು ಶುದ್ಧಮಾಡಿರುವುದನ್ನು ನೀನು ಅಶುದ್ಧ ಎಂದು ಅನ್ನಬಾರದು ಎಂದು ಮೂರು ಸಾರಿ ವಾಣಿಯಾಗಿ, ಆ ಜೋಳಿಗೆ ಮೇಲಕ್ಕೆ ಎತ್ತಲ್ಪಟ್ಟಿತು.
15


ಆ ದರ್ಶದ ಆರ್ಥಏನಾಗಿರಬಹುದೆಂದು ಯೋಚಿಸುತ್ತಿರುವಾಗ, ದೇವರು ಅವನಿಗೆ ನಿನ್ನನ್ನು ಮೂರು ಜನರು ಹುಡುಕುತ್ತೀದ್ದಾರೆ ಅವರ ಜೊತೆ ಎದ್ದು ಹೋಗು ಎಂದನು.
16


ಅವರು ತಮ್ಮ ಯಜಮಾನನಾದ ಕೊರ್ನೇಲ್ಯನನಿಗೆ ಆದಂತಹ ವಿಷಯವನ್ನು ಪೇತ್ರನಿಗೆ ತಿಳಿಸಿದರು. ದೇವರು ಅವನನ್ನು ನಡೆಸುತ್ತಿದ್ದಾನೆಂದು ಆಗ ಪೇತ್ರನಿಗೆ ತಿಳಿಯಿತು. ಮಾರನೇ ದಿನ ಅವನ ಆರು ಸ್ನೇಹಿತರ ಜೋತೆಯಲ್ಲಿ ಕೊರ್ನೇಲ್ಯನ ಮನೆಗೆ ಹೋದನು.
17


ಪೇತ್ರನು ಯಹೂದ್ಯನಲ್ಲದವನ ಮನೆಗೆ ಹೊರಟನು. ಅದರ ಮೂಲಕವಾಗಿ ದೇವರು ಎಲ್ಲರನ್ನು ಪ್ರೀತಿಸುತ್ತಾನೆಂದು ತಿಳಿದುಕೊಂಡನು. ಎಲ್ಲಾ ದೇಶದ ಜನರು ಯೇಸುವೇ ಮಾನವ ಕುಲದ ರಕ್ಷಕನೆಂದು ತಿಳಿಯಬೇಕೆಂಬುಂದು ದೇವರ ಇಚ್ಛೆಯಾಗಿದೆ. ಪೇತ್ರನು ಕೊರ್ನೇಲ್ಯನ ಮನೆಗೆ ಹೋದಾಗ ಅವನು ಅಡ್ಡ ಬಿದ್ದು ಅವನಿಗೆ ನಮಸ್ಕರಿಸಿದನು.
18


ಆಗ ಪೇತ್ರನು ಕೊರ್ನೇಲ್ಯನಿಗೆ ‘ಎದ್ದೇಳು ನಾನು ಸಹಾ ನಿನ್ನ ಹಾಗೆ ಮನುಷ್ಯನು, ...
19


... ಒಬ್ಬ ಯಹೂದ್ಯನು ಯಹೂದ್ಯನಾಗದಿರುವವನ ಮನೆಗೆ ಹೂಗುವುದು ಮತ್ತು ಅವನ ಸಂಗಡ ಸೇರುವುದು ಧರ್ಮಶಾಸ್ತ್ರದಲ್ಲಿಲ್ಲವೆಂದು ನಿಮಗೆಲ್ಲರಿಗೂ ತಿಳಿದಂತಹ ವಿಷಯವಾಗಿದೆ ಎಂದು ಅವನ ಮನೆಯಲ್ಲಿ ಸೇರಿ ಬಂದವರಿಗೆ ಹೇಳಿದನು.
20

ಆದರೆ ದೇವರು ನನಗೆ ಯಾರನ್ನೂ ಹೊಲೆ ಅಥವಾ ಅಶುದ್ಧರೆಂದು ಕರೆಯಬಾರದೆಂದು ತೋರಿಸಿದನು.




ಪೇತ್ರನು ಯೇಸುವು ನಮಗಾಗಿ ತನ್ನ ಪ್ರಾಣವನ್ನು ಕೊಟ್ಟು ತಿರುಗಿ ಎದ್ದು ಬಂದನು, ಅವರೇ ಮಾನವ ಕುಲದ ರಕ್ಷಕನು ಎಂದು ಹೇಳಿದಾಗ, ಎಲ್ಲರು ಪವಿತ್ರಾತ್ಮನಿಂದ ತುಂಬಿ ದೇವರನ್ನು ಕೊಂಡಾಡಲು ಆರಂಭಿಸಿದರು. ಅದನ್ನು ನೋಡಿದ ಯಹೂದ್ಯ ಸ್ನೇಹಿತರು ಆಶ್ಚರ್ಯಪಟ್ಟರು.




ಅಂದು ಪಂಚಾಶತ್ತಮ ದಿನದಲ್ಲಿ ಬಂದ ಹಾಗೆ ಅನ್ಯರ ಮೇಲೆಯು ಪವಿತ್ರಾತ್ಮನು ಬರುವುದನ್ನು ಕಂಡರು. ಪೇತ್ರನು ಅವರಿಗೆ ದೀಕ್ಷಾಸ್ನಾನವನ್ನು ಕೊಟ್ಟನು ಅವರು ಯೇಸುವಿಗಾಗಿ ಹೊಸ ವಿಶ್ವಾಸಿಗಳಾಗಿ ಮಾರ್ಪಟ್ಟರು.




ಪೇತ್ರನು ಅನ್ಯರನ್ನು ಸಂದಿಸಿದ್ದಾನೆಂದು ಯೇರುಸಲೇಮ್‌ನಲ್ಲಿರುವ ಕ್ರೈಸ್ತರು ಕೇಳಿ ಪೇತ್ರನನ್ನು ಗದರಿಸಿದರು. ಆಗ ಪೇತ್ರನು ತಾನು ಕಂಡ ದರ್ಶನವನ್ನು ಅವರಿಗೆ ತಿಳಿಸಿದನು. ಕೊರ್ನೇಲ್ಯನು ಯೇಸುವನ್ನು ಸ್ವಕರಿಸಿದನು ಎಂದನು. ಆ ಸುದ್ದಿಯನ್ನು ಕೇಳಿದ ಯೇರುಸಲೇಮ್‌ನಲ್ಲಿರುವ ಕ್ರೈಸ್ತರು ಸುಮ್ಮನಾಗಿ ದೇವರನ್ನು ಮಹಿಮೆ ಪಡಿಸಿದರು. ದೇವರ ಪ್ರೀತಿಯು ಪ್ರತಿಯೊಬ್ಬರಿಗೂ ಕೊಟಲ್ಪಟ್ಟಿದೆ ಎಂದು ಗ್ರಹಿಸಿಕೊಂಡರು.




ಪೇತ್ರನು ಮತ್ತು ಪ್ರಾರ್ಥನೆಯ ಶಕ್ತಿ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಅಪೋಸ್ತಲರ ಕೃತ್ಯ, **9–12**

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ **119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ **3:16**

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.